ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೨೩೦೮

ಸದಸ್ಯರ ಹೆಸರು : ಶ್ರೀ ರಾಮರೆಡ್ಡಿ ಜಿ.ಎ.

ಉತ್ತರಿಸಬೇಕಾದ ಸಚಿವರು : ಶ್ರೀ ತನ್ವೀರ ಸೇಠ್
ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು

ಪ್ರಶ್ನೆ

ಅ) ನಷ್ಟದ ನೆಪವೊಡ್ಡಿ ಕೆಲವು ಕೈಗಾರಿಕೆಗಳು ಲಾಕ್‌ಔಟ್ ಮಾಡಿ ಕಾರ್ಮಿಕರು ಬೀದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಉತ್ತರ

ಕಳೆದ ಒಂದು ವರ್ಷದಲ್ಲಿ ಈ ಕೆಳಕಂಡ ಕೈಗಾರಿಕೆಗಳು ನಷ್ಟದ ಕಾರಣ ನೀಡಿ ಬೀಗಮುದ್ರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

೧. ಮೆ. ಸೌಜ ಕ್ಯಾಶ್ಯು ಇಂಡಸ್ಟ್ರಿ, ಕುಲಶೇಖರ, ಮಂಗಳೂರು.

೨. ಭೂರೂಕಾ ಟೆಕ್ಸ್‌ಟೈಲ್ಸ್ ಲಿ., ಸುತಂಡು, ರಾಯಪುರ, ಧಾರವಾಡ ಜಿಲ್ಲೆ.

೩. ಹೆಚ್.ಜೆ.ಎಸ್. ಸ್ಪನ್ ಸಿಲ್ಕ್ ಮಿಲ್ಸ್, ಚೆನ್ನಮಾನಹಳ್ಳಿ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

೪. ಎನ್‌ಕ್ಲೋಟೆಕ್ ರೆಡಿ ಪಾನಲ್ಸ್ ಲಿ., ನಂ. ೪೦, ಜಿಗಣಿ ಕೈಗಾರಿಕಾ ಪ್ರದೇಶ, ಬೆಂಗಳೂರು.

ಪ್ರಶ್ನೆ

ಆ) ಇದ್ದಲ್ಲಿ, ಈ ಕೈಗಾರಿಕೆಗಳು ಪುನರ್ ಪ್ರಾರಂಭಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಉತ್ತರ

ಬೀಗಮುದ್ರೆ ಘೋಷಿಸಿದ ಮೇಲ್ಕಂಡ ೪ ಕಾರ್ಖಾನೆಗಳ ಬಗ್ಗೆ ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

೧. ಮೆ: ಸೌಜ ಕ್ಯಾಶ್ಯು ಇಂಡಸ್ಟ್ರಿ, ಕುಲಶೇಖರ, ಮಂಗಳೂರು:

ಈ ಕಾರ್ಖಾನೆಗೆ ೨೮.೧.೨೦೦೪ರಿಂದ ಬೀಗಮುದ್ರೆ ಘೋಷಿಸಲಾಗಿರುತ್ತದೆ. ಉಪ ಕಾರ್ಮಿಕ ಆಯುಕ್ತರು, ಹಾಸನ ಇವರು ನಡೆಸಿದ ರಾಜಿ ಸಂಧಾನ ಪ್ರಯತ್ನದಿಂದಾಗಿ ದಿನಾಂಕ: ೮.೧೦.೨೦೦೪ರಂದು ಒಪ್ಪಂದವೇರ್ಪಟ್ಟು ೨೧.೧೧.೨೦೦೪ರಿಂದ ಬೀಗಮುದ್ರೆ ತೆರವುಗೊಳಿಸಲು ಒಪ್ಪಲಾಗಿರುತ್ತದೆ. ಬೀಗಮುದ್ರೆ ಅವಧಿಯ

ವೇತನದ ಬಗ್ಗೆ ವಿವಾದದ ಬೇಡಿಕೆಯನ್ನು ನ್ಯಾಯ ನಿರ್ಣಯಕ್ಕಾಗಿ ಔದ್ಯಮಿಕ ನ್ಯಾಯಾಧೀಕರಣಕ್ಕೆ ಸರ್ಕಾರದ ಆದೇಶ ಸಂ:ಕಾಇ ೨೯ಳ ಐಡಿಎಂ ೨೦೦೪ ದಿನಾಂಕ: ೨೩.೧೧.೨೦೦೪ರಂದು ಒಪ್ಪಿಸಲಾಗಿರುತ್ತದೆ. ಆದರೆ, ಆಡಳಿತ ವರ್ಗದವರು ಈ ಒಪ್ಪಂದವನ್ನು ಅನುಷ್ಠಾನಕ್ಕೆ ತರದೇ ಉಲ್ಲಂಘನೆ ಮಾಡಿರುವುದರಿಂದ ಸದರಿಯವರ ಮೇಲೆ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

೨. ಭೊರೂಕಾ ಟೆಕ್ಸ್‌ಟೈಲ್ಸ್ ಲಿ., ಸುತ್ತೂರು, ರಾಯಪುರ, ಧಾರವಾಡ ಜಿಲ್ಲೆ:

ಈ ಕೈಗಾರಿಕೆಗೆ ದಿನಾಂಕ ೨೩.೨.೨೦೦೩ರಿಂದ ಬೀಗಮುದ್ರೆ ಘೋಷಿಸಲಾಗಿರುತ್ತದೆ. ಈ ಕಾರ್ಖಾನೆಗೆ ಸಂಬಂಧಪಟ್ಟಂತೆ ವಿವಾದವು ಇತ್ಯರ್ಥವಾಗದೇ ಇರುವ ಕಾರಣ ಸರ್ಕಾರಿ ಆದೇಶ ಸಂ:ಕಾಇ ೮೭ ಐಡಿಬಿ ೨೦೦೪ ದಿನಾಂಕ: ೧೦.೮.೨೦೦೪ರ ಆದೇಶದ ಮೂಲಕ ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ ಇಲ್ಲಿಗೆ ಕಳುಹಿಸಿದೆ. ಹಾಗೂ ಮುಂದುವರೆಯುತ್ತಿರುವ ಬೀಗಮುದ್ರೆಯನ್ನು ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಿರುತ್ತದೆ. ಈ ಆದೇಶವನ್ನು ಆಡಳಿತ ವರ್ಗದವರು ರಿಟ್ ಅರ್ಜಿ ಸಂ. ೩೪೦೭೮/೦೪ರಲ್ಲಿ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: ೨೬.೮.೨೦೦೪ರಂದು ತಡೆಹಿಡಿದಿದೆ.

೩. ಹೆಚ್.ಜೆ.ಎಸ್.ಸ್ಪನ್ ಸಿಲ್ಕ್ ಮಿಲ್ಸ್, ಚೆನ್ನಮಾನಹಳ್ಳಿ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ:

ಈ ಕೈಗಾರಿಕೆಗೆ ದಿನಾಂಕ: ೧೪.೫.೨೦೦೩ರಿಂದ ಬೀಗಮುದ್ರೆ ಘೋಷಿಸಲಾಗಿರುತ್ತದೆ. ವಿವಾದವು ಇತ್ಯರ್ಥವಾಗದ ಕಾರಣ, ಸರ್ಕಾರದ ಆದೇಶ ಸಂ:ಕಾಇ ೨೮ಳ ಐಡಿಜಿ ೨೦೦೪(೨)ರ ಮೂಲಕ ಔದ್ಯಮಿಕ ನ್ಯಾಯಾಧೀಕರಣ, ಬೆಂಗಳೂರು ಇಲ್ಲಿಗೆ ನ್ಯಾಯ ನಿರ್ಣಯಕ್ಕಾಗಿ ಕಳುಹಿಸಿದೆ. ಹಾಗೂ ಮುಂದುವರಿಯುತ್ತಿರುವ ಬೀಗಮುದ್ರೆಯನ್ನು ನಿಷೇದಿಸಿರುತ್ತದೆ.

೪. ಎನ್‌ಕ್ಲೋಟಕ್ ರೆಡಿ ಪಾನಲ್ಸ್ ಲಿ., ನಂ. ೪೦, ಜಿಗಣಿ ಕೈಗಾರಿಕಾ ಪ್ರದೇಶ, ಬೆಂಗಳೂರು:

ದಿನಾಂಕ ೧೨.೬.೨೦೦೪ರಿಂದ ಈ ಕೈಗಾರಿಕೆಗೆ ಬೀಗಮುದ್ರೆಯನ್ನು ಘೋಷಿಸಲಾಗಿದೆ. ಈ ಬಗ್ಗೆ ಸಹಾಯಕ ಕಾರ್ಮಿಕ ಆಯುಕ್ತರು, ಬೆಂಗಳೂರು ವಿಭಾಗ-೪ ಇವರ ರಾಜೀ ಸಂಧಾನದ ಪ್ರಯತ್ನದಿಂದಾಗಿ ದಿನಾಂಕ: ೧೦.೯.೨೦೦೪ರಂದು ಒಪ್ಪಂದವೇರ್ಪಟ್ಟು ದಿನಾಂಕ: ೧೧.೯.೨೦೦೪ರಂದು ಬೀಗಮುದ್ರೆ ತೆರವುಗೊಳಿಸಲಾಗಿದೆ.

ಶ್ರೀ ಜಿ.ಎ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಫ್ಯಾಕ್ಟರಿಗಳು ಮುಚ್ಚಿರತಕ್ಕಂಥದ್ದು ಮತ್ತು ಲಾಕೌಟ್ ಮಾಡಿರತಕ್ಕಂಥದ್ದು ಎಷ್ಟು? ಎಂದು ನಾನು ಅವರಿಗೆ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ನಾಲ್ಕು ಎಂದು ಉತ್ತರಿಸಿ ಅವುಗಳ ಪಟ್ಟಿಯನ್ನು ಸಹ ಕೊಟ್ಟಿದ್ದಾರೆ. ಈ ನಾಲ್ಕು ಫ್ಯಾಕ್ಟರಿಗಳ ಪೈಕಿ ಮೆಟಲ್ ಕ್ಲೋಸರ್ ಇಲ್ಲ, ಪರ್ಫೆಕ್ಟ್ ಅಪಾರೆಲ್ಸ್ ಆಗಲಿ ಇಲ್ಲ, ಅದನ್ನೂ ಕ್ಲೋಸ್ ಮಾಡಿ ಬಿಟ್ಟಿದ್ದಾರೆ. ಆದರೆ ಅದನ್ನು ಇವರು ಉತ್ತರದಲ್ಲಿ ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ? ಅವು ಕ್ಲೋಸ್ ಆಗಿರತಕ್ಕಂಥದ್ದು ಅಥವಾ ಅದನ್ನು ಮುಚ್ಚಿರತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿಲ್ಲವೇ? ೧ ರಿಂದ ೧ ೧/೨ ತಿಂಗಳಿನಿಂದ ಆ ಎರಡೂ ಫ್ಯಾಕ್ಟರಿಗಳು ಮುಚ್ಚಿರತಕ್ಕಂಥದ್ದು ನಿಮ್ಮ ಗಮನಕ್ಕೆ ಏಕೆ ಬರಲಿಲ್ಲ? ಬಂದಿದ್ದರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದು ನನ್ನ ಮೊದಲನೇ ಪ್ರಶ್ನೆ. ನನ್ನ ಎರಡನೇ ಪ್ರಶ್ನೆ ಏನೆಂದರೆ, ಕಾರ್ಮಿಕ ಆಯುಕ್ತರು ಕೊಟ್ಟಿರತಕ್ಕಂಥ ವರದಿಯ ಆಧಾರದ ಮೇಲೆ ಬೀಗಮುದ್ರೆ ಘೋಷಿಸಲಾಗಿರುತ್ತದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿರುತ್ತೀರಿ. ಕಾರ್ಮಿಕ ಆಯುಕ್ತರು ಯಾವ ಕಾರಣಕ್ಕೋಸ್ಕರ, ಯಾವ ಆಧಾರದ ಮೇಲೆ ಬೀಗಮುದ್ರೆ ಹಾಕಲಿಕ್ಕೆ ಅವರ ರಿಪೋರ್ಟ್ ಅನ್ನು ಕೊಟ್ಟಿದ್ದಾರೆ?

ಶ್ರೀ ತನ್ವೀರ್ ಸೇಠ್ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ನಷ್ಟದ ನೆಪ ಹೂಡಿ ಕಾರ್ಖಾನೆಗಳು ಎಷ್ಟು ಮುಚ್ಚಿ ಹೋಗಿವೆ? ಎಂದು ಪ್ರಶ್ನೆ ಕೇಳಿದ್ದಾರೆ. ಅದರಂತೆ ಕಳೆದ ಒಂದು ವರ್ಷದಲ್ಲಿ ಹಿಂದಿನ ವರ್ಷಗಳಿಂದ ನಡೆದುಕೊಂಡು ಬಂದಿರುವಂತಹ ಕಾರ್ಖಾನೆಗಳಲ್ಲಿ ನಾಲ್ಕು ಕಾರ್ಖಾನೆಗಳು ಬೀಗಮುದ್ರೆ ಮಾಡಿವೆ. ಅದರ ವಿವರಗಳನ್ನೂ ಸಹ ನಾನು ಮಾನ್ಯ ಸದಸ್ಯರಿಗೆ ಒದಗಿಸಿದ್ದೇನೆ. ಮಾನ್ಯ ಸದಸ್ಯರು ತಮ್ಮ ಉಪ ಪ್ರಶ್ನೆಯಲ್ಲಿ ಮೆಟಲ್ ಕ್ಲೋಸರ್ ಹಾಗೂ ಪರ್ಫೆಕ್ಟ್ ಅಪಾರೆಲ್ಸ್ ವಿಚಾರದ ಬಗ್ಗೆ ಕೇಳಿದ್ದಾರೆ. ಮೆಟಲ್ ಕ್ಲೋಸರ್ ಸಂಸ್ಥೆಯು ತನ್ನ ಕಾರ್ಖಾನೆಯನ್ನು ಬೀಗ ಮುದ್ರೆಗೊಳಿಸಿಲ್ಲ, ಕಾರ್ಮಿಕರಿಗೆ ಕೆಲಸ ಇಲ್ಲದೆ, ವೇತನ ನೀಡುತ್ತಿರುವ ಪ್ರಕರಣ ನಮ್ಮ ಇಲಾಖೆಗೆ ಬಂದಿದೆ. ಇದರ ಜೊತೆಗೆ, ಅಲ್ಲಿದ್ದಂತಹ ಹಲವರು, ತಮ್ಮ ಕಾರ್ಮಿಕರ ಬೇಡಿಕೆಗಳು ಹಾಗೂ ಅಲ್ಲಿ ವಿವಾದವನ್ನು ಬಗೆಹರಿಸಿ, ನನ್ನ ಇಲಾಖೆಯ ಕಾರ್ಮಿಕ ಆಯುಕ್ತರು ಈಗಾಗಲೇ Industrial Dispute Act ಪ್ರಕಾರ ಮಾಲೀಕರ ಮೇಲೆ ಕ್ರಮ ಜರುಗಿಸಲು ಅವರಿಗೆ ನಾವು prosecute ಮಾಡುವಂತಹ ಆದೇಶ ಸಹ ನಾವು ಹೊರಡಿಸಿದ್ದೇವೆ. ಇದರ ಜೊತೆಗೆ ಹಿಂದಿನ ಕನಿಷ್ಠ ವೇತನದ ಪ್ರಕರಣಗಳು ಏನಿತ್ತು, ಅದನ್ನು ನಾವು ಆದೇಶ ಮಾಡಿದ್ದರೂ, ಮಾಲೀಕರು ಈವರೆಗೂ ಮಾಡದಿರುವುದರಿಂದ. ಅವರ ಮೇಲೆ prosecution ಗೆ ನಾವು ಮೂವ್ ಮಾಡಿದ್ದೇವೆ. ಈಗ ಹಾಲಿ ಮುಂದೆ ಅವರಿಗೆ ಕನಿಷ್ಠ ವೇತನ ಕೊಡುವಂತಹ ವಿಚಾರದಲ್ಲಿ ನನ್ನ ಇಲಾಖಾ ಅಧಿಕಾರಿಗಳು ಅಲ್ಲಿ ವೇತನ ನಾವು ಕಾರ್ಮಿಕರಿಗೆ ಕೊಡುವಂತಹ ಸಂದರ್ಭದಲ್ಲಿ ನನ್ನ ಇಲಾಖಾ ಅಧಿಕಾರಿಗಳು

ಅಲ್ಲಿ ಕುಳಿತು, ಅಲ್ಲಿ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಪರ್ಫೆಕ್ಟ್ ಅಪಾರೆಲ್ಸ್ ವಿಚಾರದಲ್ಲಿ, ಅದು ನನ್ನ ಇಲಾಖೆಗೆ ಬಂದಿದೆ. ಅದು ನಷ್ಟದ ನೆಪದಲ್ಲಿ ಮುಚ್ಚಿರುವಂತಹ ಕಾರ್ಖಾನೆಯಲ್ಲ. ಆ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಇನ್ನೂ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ, ಇದು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಒಂದು ಸಭೆಯನ್ನು ಕರೆಯಬೇಕೆಂದು ಹೇಳಿದ್ದಾರೆ. ಆ ವಿಚಾರಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಸಮಯ ನಿಗದಿ ಮಾಡಿ, ನನ್ನ ಇಲಾಖಾಧಿಕಾರಿಗಳ ಜೊತೆಗೆ ಸಮಾಲೋಚನೆ ನಡೆಸಲಿಕ್ಕೆ ನಾವು ಮುಂದಾಗುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಕಾನೂನು ಪ್ರಕಾರ ಕೂಲಿ ಕೊಡಬೇಕು ಎಂದು ಸರ್ಕಾರ ಆದೇಶ ಮಾಡಿದ್ದರೂ ಕೂಡ, ಅದನ್ನು ಅವರು ಪಾಲನೆ ಮಾಡಿಲ್ಲ ಎಂದು ನೀವೇ ಹೇಳಿದಿರಿ. ಪಾಲನೆ ಮಾಡಿಲ್ಲ ಎಂದಾಗ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಕಾರ್ಮಿಕರು ಸಂಬಳ ಜಾಸ್ತಿ ಬೇಕು ಎಂದು ಹೇಳಿ, ಈಗ ಅವರೇ ಹೇಳಿದರು, ಮೆಟಲ್ ಕ್ಲೋಸರ್‌ದು. ಅವರ ಡಿಮ್ಯಾಂಡ್ಸ್ ಬಗ್ಗೆ ಹೋರಾಟ ಮಾಡಿದಾಗ, ಹುಣಸೂರಿಗೆ ಟ್ರಾನ್ಸ್‌ಫರ್ ಮಾಡಿದಿರಿ ನೀವು. ಹುಣಸೂರಿಗೆ ಟ್ರಾನ್ಸ್‌ಫರ್ ಮಾಡುವುದರ ಬಗ್ಗೆ ನನ್ನ ತಕರಾರಿಲ್ಲ, ಆದರೆ ಬೆಂಗಳೂರಿನಲ್ಲಿ ಕೊಡತಕ್ಕಂಥ ಸಂಬಳಕ್ಕೂ ಹುಣಸೂರಿನಲ್ಲಿ ಕೊಡತಕ್ಕಂಥ ಸಂಬಳಕ್ಕೂ ವ್ಯತ್ಯಾಸ ಇದೆ. ಕಾರ್ಮಿಕರು ಹೋರಾಟ ಮಾಡಿದ್ದಿಕ್ಕೆ ಪನಿಷ್‌ಮೆಂಟ್ ಟ್ರಾನ್ಸ್‌ಫರ್ ನೀವು ಮಾಡಿದ್ದೀರಿ. ಆದರೆ ಸರ್ಕಾರದ ಕಾನೂನನ್ನು ಜಾರಿ ಮಾಡದೇ ಇರತಕ್ಕಂಥ ಮಾಲೀಕನನ್ನು ಜೈಲಿಗೆ ಮಾತ್ರ ಹಾಕಲಿಕ್ಕೆ ನೀವು ತಯಾರಿಲ್ಲ, ನಾನು ಈ ವಿಚಾರವನ್ನು ಸುಮಾರು ಸಲ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದೇನೆ. ಇದನ್ನು ಚರ್ಚೆ ಮಾಡೋಣ ಎಂದು ಸುಮಾರು ಸಲ ಹೇಳಿದರು. ಆದರೆ ಆ ಡೇಟ್ ಇವತ್ತಿನವರೆಗೂ ನಿಗದಿಯಾಗಲಿಲ್ಲ, ಪರ್ಫೆಕ್ಟ್ ಅಪಾರೆಲ್ಸ್ ಬಗ್ಗೆ ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಅವನು ಸರ್ಕಾರದ ಎಲ್ಲಾ ಆದೇಶಗಳನ್ನು ಆಜ್ಞೆಗಳನ್ನು ಉಲ್ಲಂಘನೆ ಮಾಡಿದ್ದಾನೆ. ಪ್ರಾವಿಡೆಂಟ್ ಫಂಡ್ ಅನ್ನು ಕಟ್ಟಿಲ್ಲ ಎಂಬ ಬಗ್ಗೆ ಕಾರ್ಮಿಕರ ಆಯುಕ್ತರೇ ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಅವನು ಇದನ್ನೆಲ್ಲಾ ಮಾಡುತ್ತಿಲ್ಲ ಎಂದು ಅವರೇ ಹೇಳಿದ್ದಾರೆ. ಅಲ್ಲಿ ಎಲ್ಲಾ ಕೆಲಸ ಮಾಡುವವರು ಮಹಿಳೆಯರು. ಪರ್ಫೆಕ್ಟ್ ಅಪಾರೆಲ್ಸ್‌ನಲ್ಲಿ ಸಂಪೂರ್ಣವಾಗಿ ನೂರಕ್ಕೆ ನೂರಷ್ಟು ಕೆಲಸ ಮಾಡತಕ್ಕಂಥವರು ಮಹಿಳೆಯರು. ಅವರ ಮೇಲೆ ದಬ್ಬಾಳಿಕೆ ನಡೆದಿದೆ. ಅವರನ್ನು ಹೊಡೆದಿದ್ದಾರೆ. ಅದನ್ನು ಟಿವಿಯಲ್ಲಿ ತೋರಿಸಿದ್ದಾರೆ. ಬಟ್ಟೆ ಬಿಚ್ಚಿ ಹೊಡಿಸಿದ್ದಾರೆ. ಇಷ್ಟೆಲ್ಲಾ ಮಾಡಿ, ಅವರನ್ನು ಹೆದರಿಸಿ, ಬೆದರಿಸಿ, ಇವತ್ತು ಆ ಫ್ಯಾಕ್ಟರಿಯನ್ನು ಕ್ಲೋಸ್ ಮಾಡಿದ್ದಾನೆ. ಅದು ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ತನ್ವೀರ್ ಸೇಠ್ : ಗಮನಕ್ಕೆ ಬಂದಿಲ್ಲವೆಂದು ನಾನು ಹೇಳಲಿಲ್ಲ. ಗಮನಕ್ಕೆ ಬಂದಿದೆ. ಇಲಾಖೆ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನ ಪ್ರಶ್ನೆ ಕಾರ್ಮಿಕರ ಹಿತಾಸಕ್ತಿ ಅಷ್ಟೇ. ಈ ವಿಚಾರದಲ್ಲಿ ಸರ್ಕಾರ ಕಾರ್ಮಿಕರ ಪರವೋ, ಮಾಲೀಕರ ಪರವೋ ಎನ್ನತಂಕ್ಕಂಥದ್ದನ್ನು ಸ್ಪಷ್ಟ ಮಾಡಬೇಕು.

ಶ್ರೀ ತನ್ವೀರ್ ಸೇಠ್ : ಕಾರ್ಮಿಕ ಇಲಾಖೆ ಇವತ್ತು ಅಪಲೇಟ್ ಪವರ್ ಇರುವಂತಹ ಇಲಾಖೆ ವಿಚಾರಣಾಧಿಕಾರಿಗಳು ತಮ್ಮ ವರದಿಯನ್ನು ಮೇಲಧಿಕಾರಿಗಳಿಗೆ ಕೊಟ್ಟ ಮೇಲೆ, ಅಲ್ಲಿ ಇರುವಂತಹ ವ್ಯಾಜ್ಯವನ್ನು ನಾವು ಅಲ್ಲಿ ಇತ್ಯರ್ಥ ಮಾಡಿ, ಸರ್ಕಾರಕ್ಕೆ ವರದಿ ಬಂದ ಮೇಲೆ ನಾವು ಅದನ್ನು ಕಾನೂನು ರೀತಿಯಲ್ಲಿಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ಲೇಬರ್ ಟ್ರಿಬ್ಯುನಲ್‌ಗೆ ಸಾಕಷ್ಟು ಪ್ರಕರಣಗಳನ್ನು ನಾವು ಕಳುಹಿಸಿದ್ದೇವೆ. ಸಾಕಷ್ಟು ವಿಚಾರದಲ್ಲಿ ನಮ್ಮ ಇಲಾಖೆ ತೆಗೆದುಕೊಂಡಿರುವಂತಹ ತೀರ್ಮಾನ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿಯೂ ಸಹಿತ ಎತ್ತಿ ಹಿಡಿಯುವಂತಹ ಕೆಲಸ ಆಗಿದೆ. ರಾಜ್ಯ ಸರ್ಕಾರ ಈ ಒಂದು ಕಾರ್ಮಿಕರ ಪರವೋ, ಮಾಲೀಕರ ಪರವೋ ಎಂದು ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ, ಕಾರ್ಮಿಕರ ಪರ ಇದೆ ಎಂದು ಬದ್ಧವಾಗಿ ಹೇಳುತ್ತೇನೆ. ನಾವು ಬದ್ಧವಾಗಿದ್ದೇವೆ ಎಂದು ನಾನು ಸ್ಪಷ್ಟವಾಗಿ ಉತ್ತರ ಹೇಳಬಯಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಕಾರ್ಮಿಕರ ಪರ ಇದ್ದರೆ, ಕಾನೂನು ಪ್ರಕಾರವಾಗಿ ಜಾರಿ ಮಾಡದೇ ಇರತ್ಕಂಥ, ಆ ಮಾಲೀಕನ ಮೇಲೆ ಕಾನೂನ ಕ್ರಮ ಏಕೆ ತೆಗೆದುಕೊಳ್ಳಲಿಲ್ಲ? ಇದು ನನ್ನ ಮೂಲಭೂತವಾದಂತಹ ಪ್ರಶ್ನೆ. ಎರಡನೆಯದು, ನೀವು, ನಾವೆಲ್ಲಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ, ಸಂಬಂಧಪಟ್ಟಂತಹ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ಕಾರ್ಮಿಕ ಇಲಾಖೆಗೆ ಅಪಲೇಟ್ ಅಥಾರಿಟಿ ಇದೆ, ಅಪಲೇಟ್ ಅಥಾರಿಟಿ ಇರತಕ್ಕಂಥ ಕಾರಣಕ್ಕೋಸ್ಕರ, ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳುವುದಾದರೆ, ಇದಕ್ಕೊಬ್ಬ ಮಂತ್ರಿ ಬೇಕಾಗಿಲ್ಲ. ಹಾಗಾದರೆ ಇಲಾಖೆಗೆ ಮಂತ್ರಿ ಏಕೆ ಬೇಕು? ಇಲಾಖೆಗೆ ಮಂತ್ರಿ ಇರತಕ್ಕಂಥದ್ದು. ಬರೀ ಅಧಿಕಾರಿಗಳು ಹೇಳಿದಂತೆ ಕೇಳಿಕೊಂಡು ಇರಲಿಕ್ಕಲ್ಲ. ಸರ್ಕಾರದ ಪಾಲಿಸಿಯನ್ನು ಇಂಪ್ಲಿಮೆಂಟ್ ಮಾಡಿಸಲಿಕ್ಕೆ ಇಲಾಖಾ ಮಂತ್ರಿ ಇರಬೇಕಾಗುತ್ತದೆ. ಹಾಗಿದ್ದರೆ ಮಂತ್ರಿ ಮಂಡಲ ಬೇಕಾಗಿಲ್ಲ, ಪ್ರಜಾಪ್ರಭುತ್ವದಲ್ಲಿ ಸರ್ಕಾರವೂ ಬೇಕಾಗಿಲ್ಲ. ಅಧಿಕಾರಿಗಳೇ ಎಲ್ಲಾ ನೋಡಿಕೊಳ್ಳುತ್ತಾರೆ....

ಅಧ್ಯಕ್ಷರು : ತಾವು ಪ್ರಶ್ನೆ ಕೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರ ಮೇಲೆ ಹಾಕಿ ತಪ್ಪಿಸಿಕೊಳ್ಳತಕ್ಕಂಥದ್ದಲ್ಲ. ನೂರಾರು ಜನ ಮಹಿಳಾ ಕಾರ್ಮಿಕರು ಇವತ್ತು ಬೀದಿಗೆ ಬಿದ್ದಿದ್ದಾರೆ. ಅಧಿಕಾರಿಗಳು ಏನು ಅಪಲೇಟ್ ಅಥಾರಿಟಿ ಇದೆ, ಅವರೇನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ನೀವು ಸುಮ್ಮನೆ ಕೂರಲಿಕ್ಕಾಗುವುದಿಲ್ಲ, ಸುಮ್ಮನೆ ಕೂರಲಿಕ್ಕಾದರೆ ಅದಕ್ಕೆ ಮಂತ್ರಿ ಬೇಕಾಗಿಲ್ಲ.

ಶ್ರೀ ತನ್ವೀರ್ ಸೇಠ್ : ಮಾನ್ಯ ಸಭಾಧ್ಯಕ್ಷರೇ, ಇಲಾಖೆ ನಡೆಯುವಂತಾದ್ದು, ಅದರ ಕಾರ್ಯವೈಖರಿ ಯಾವ ರೀತಿ ನಡೆಯಬೇಕೋ, ಆ ರೀತಿಯಲ್ಲಿ ನಡೆಯುತ್ತಿದೆ. ಸಚಿವನಾಗಿ ನಾನು ನನ್ನ ಇಲಾಖೆ ಮೇಲೆ ಹತೋಟಿ ಇಟ್ಟುಕೊಳ್ಳುವುದು ನನ್ನ ಜವಾಬ್ದಾರಿ. ಆ ಕೆಲಸವನ್ನು ನಾನು ಮಾಡುತ್ತಿದ್ದೇನೆ. ಇವತ್ತು ಮಾನ್ಯ ಸದಸ್ಯರು ಎತ್ತಿರುವಂತಹ ಪ್ರಶ್ನೆಗೆ ಹೇಳುವುದಾದರೆ, ಸರ್ಕಾರ ಈಗಾಗಲೇ ನಾವು ಜಾರಿಗೆ ಮಾಡಿರುವಂತಹ ಆದೇಶಗಳನ್ನು ಉಲ್ಲಂಘಿಸಿರುವುದಕ್ಕೆ ಅವರಿಗೆ ನಾವು ಪ್ರಾಸಿಕ್ಯೂಷನ್‌ಗೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಅದು ಈಗ ನ್ಯಾಯಾಲಯಕ್ಕೆ ಹೋಗಿರುವುದರಿಂದ, ಅದರ ವಿಚಾರದಲ್ಲಿ ಹೆಚ್ಚಾಗಿ ನಾವು ಇಲ್ಲಿ ವಿವರ ನೀಡುವುದಕ್ಕಾಗುವುದಿಲ್ಲ. ಅದು ಸಬ್-ಜುಡೀಸ್ ಆಗುತ್ತದೆ. ಇದರ ಜೊತೆಗೆ ನಾವು ಕಾರ್ಮಿಕ ಇಲಾಖೆಯಲ್ಲಿ ತೆಗೆದುಕೊಂಡಿರುವಂತಹ ಎಲ್ಲಾ ಕ್ರಮಗಳ ಬಗ್ಗೆ ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಕಳುಹಿಸಿಕೊಡುತ್ತೇನೆ. ಅವರು ಏನು ದಾಖಲಾತಿ ಕೇಳಿದರೂ, ನಾನು ಅದನ್ನು ಒದಗಿಸಿಕೊಡುವುದಕ್ಕೆ ಸಿದ್ಧನಿದ್ದೇನೆ.

ಅಧ್ಯಕ್ಷರು : ಐವಾನ್ ನಿಗ್ಲಿಯವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈಗಾಗಲೇ ಬಹಳ ಹೊತ್ತಾಯಿತು. ಇನ್ನು ೨೦ ನಿಮಿಷದಲ್ಲಿ ನಾನು ಮುಗಿಸಬೇಕು. ನಾನು ಐವಾನ್ ನಿಗ್ಲಿಯವರನ್ನು ಕರೆದಿದ್ದೇನೆ.

ಶ್ರೀ ತನ್ವೀರ್ ಸೇಠ್ : .....ನಾನು ಹೇಳಿದ್ದೇನೆ. ತಮಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಒಂದು ಸಭೆ ಬೇಕು ಎಂದರೆ, ಮಾಡೋಣ.

ಅಧ್ಯಕ್ಷರು : ಐವಾನ್ ನಿಗ್ಲಿಯವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ..... ಮುಖ್ಯಮಂತ್ರಿಗಳು ಸಮಯ ಕೊಟ್ಟಿದ್ದರು. ಅದು ಎರಡು ಸಲ ಪೋಸ್ಟ್‌ಪೋನ್ ಆಯಿತು.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ನಿಮ್ಮದೊಂದೇ ಪ್ರಶ್ನೆಗೆ ನಾನು ೧೦-೧೫ ನಿಮಿಷ ತೆಗೆದುಕೊಂಡರೆ, ಉಳಿದ ಪ್ರಶ್ನೆಗಳ ಗತಿ ಏನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್ : ಉತ್ತರವಲ್ಲ, ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ನೀವು ಪದೇ ಪದೇ ಎದ್ದು ನಿಂತುಕೊಂಡರೆ ಅವರು ಏಳಲೇಬೇಕಾಗುತ್ತದೆ. ಹಿರಿಯ ಸದಸ್ಯರಾದ ನೀವು ಸಭಾ ನಿಯಮಗಳನ್ನು ನೀವು ಪಾಲಿಸಿ.

ಶ್ರೀ ಧರ್ಮಸಿಂಗ್ : ಒಂದು ಸಲ ಸಮಯ ಕೊಟ್ಟಾಗ ಅವರು ದೆಹಲಿಗೆ ಹೋಗಿದ್ದರು. ಎರಡನೇ ಸಲ ಅವರ ತಾಯಿಯವರು ತೀರಿಕೊಂಡಿದ್ದರು. ಇನ್ನೊಂದು ಸಲ ಮೀಟಿಂಗ್ ಫಿಕ್ಸ್ ಮಾಡಿ ಇದನ್ನು ಇತ್ಯರ್ಥ ಮಾಡೋಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೨೫
ಸದಸ್ಯರ ಹೆಸರು : ಶ್ರೀ ಐವಾನ್ ನಿಗ್ಲಿ (ನಾಮಾಂಕಿತ)
ವಿಷಯ : ಅಲ್ಪಸಂಖ್ಯಾತರಿಗೆ ವಸತಿ ಶಾಲೆಗಳು
ಸಚಿವರ ಹೆಸರು ಮತ್ತು ಪದನಾಮ : ಶ್ರೀ ಜಬ್ಬಾರ್ ಖಾನ್ ಹೊನ್ನಾಳಿ
(ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು)

ಕ್ರ.ಸಂ.	ಪ್ರಶ್ನೆ
ಅ.	ಅಲ್ಪಸಂಖ್ಯಾತರಿಗೆ ಬೆಂಗಳೂರಿನ ಆಸುಪಾಸಿನಲ್ಲಿ ವಸತಿ ಶಾಲೆಯನ್ನು ತೆರೆಯಲು ಕೈಗೊಂಡ ಕ್ರಮವೇನು:

ಉತ್ತರ

೨೦೦೫-೦೬ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಅಲ್ಪಸಂಖ್ಯಾತರಿಗೆ ೧೩ ಹೊಸ ವಸತಿ ಶಾಲೆಗಳನ್ನು ಪ್ರಾರಂಭಿಸಲು ಘೋಷಿಸಿರುತ್ತದೆ. ಒಂದನ್ನು ಬೆಂಗಳೂರಿನ ಆಸುಪಾಸಿನಲ್ಲಿ ಪ್ರಾರಂಭಿಸಲಾಗುವುದು.

ಕ್ರ.ಸಂ.	ಪ್ರಶ್ನೆ
ಆ.	ಹಾಗಿದ್ದರೆ, ಆಂಗ್ಲೋ ಇಂಡಿಯನ್ ಸಮಾಜಕ್ಕೆ ಒಂದು ವಸತಿ ಶಾಲೆ ಒದಗಿಸಲು ಕೈಗೊಂಡ ಕ್ರಮವೇನು: (ಸ್ಥಳದ ಬಗ್ಗೆ ವಿವರ ನೀಡುವುದು)

ಉತ್ತರ

ವಸತಿ ಶಾಲೆಗಳನ್ನು ಅಲ್ಪಸಂಖ್ಯಾತರ ಜಾತಿ/ಮತ ಆಧಾರದ ಮೇಲೆ ಮಂಜೂರು ಮಾಡುವುದಿಲ್ಲ. ಆದ್ದರಿಂದ ಆಂಗ್ಲೋ ಇಂಡಿಯನ್ ಸಮಾಜಕ್ಕೆ ಜಾತಿ/ಮತದ ಆಧಾರದ ಮೇಲೆ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.